

ಚಿತ್ರ: **ಕೆಚೆ**
ನಿರ್ದೇಶನ: **ಮೈಖೇಲ್ ಹನೆಕೆ**
ಭಾಷೆ: **ಫ್ರೆಂಚ್**
ಅವಧಿ: **118 ನಿಮಿಷ**
ವರ್ಷ: **2005**

ಪಾಪಪಜ್ಞೆಯಿಂದ ಹೊರಬಂದನೇ? ಅಥವಾ ನವ್ಯೋತ್ತರ ಸಾಹಿತ್ಯ–ಸಿನಿಮಾಗಳ (ಪೋಸ್ಟ್ ಮಾಡರ್ನ್) ತಂತ್ರವಾದ ಬರಹಗಾರ ಅಥವಾ ನಿರ್ದೇಶಕನೇ ಕತೆಯಲ್ಲಿ ಭಾಗಿಯಾಗುತ್ತಾ ಕತೆಯನ್ನು ಬೇರೊಂದು ಹಾದಿಯಲ್ಲಿ ಸರಿಸುತ್ತಿದ್ದಾನೆಯೇ? ಅಂದರೆ, ಕತೆಯ ಮುಖ್ಯ ಪಾತ್ರವಾದ ಜಾರ್ಜ್‌ನಿಗೆ ಹನೆಕೆಯೇ ಅಂದರೆ ನಿರ್ದೇಶಕನೇ ವಿಡಿಯೊ ಕ್ಯಾಸೆಟ್‌ಗಳ ಕಳುಹಿಸುವ ಮುಖೇನ ನೋಡುಗರನ್ನು ವರ್ತಮಾನ– ಇತಿಹಾಸಗಳನ್ನು ಕೆದಕಿ ಕಟ್ಟುವಂತೆ ಪ್ರೇರೇಪಿಸುತ್ತಿದ್ದಾನೆಯೇ? ಆ ಮೂಲಕ ಸಂಪ್ರದಾಯವಾದೀ ಸಿನಿಮಾ ನೋಟಕ್ರಮವನ್ನು ಒಡೆದು ಹೊಸ ನೋಟಕ್ರಮಕ್ಕೆ ನಮ್ಮನ್ನು ಅಣಿಗೊಳಿಸುತ್ತಿದ್ದಾನೆಯೇ? ಕೆಚೆ ಎಂಬ ಫ್ರೆಂಚ್ ಪದದ ಇಂಗ್ಲಿಷ್ ಅನುವಾದ 'ಹಿಡೆನ್' ಎಂಬ ಪದಕ್ಕೆ ನಾವು 'ಗುಪ್ತ' ಅಥವಾ 'ಮರೆಯಾಗಿರುವುದು' ಅಥವಾ 'ಮುಚ್ಚಿಡಲ್ಪಟ್ಟಿರುವುದು' ಎಂದು ಹೇಳಬಹುದು. ಕತೆಗೆ ಸೂಕ್ತವಾಗಿರುವ ಚಿತ್ರದ ಶೀರ್ಷಿಕೆ ಹಲವಾರು 'ಹಿಡೆನ್'ಗಳ ಹೊಂದಿವೆ. ಹಲವಾರು ವಿಚಾರಗಳು ಹುದುಗಿಕೊಂಡಿವೆ, ಚಿತ್ರದಲ್ಲಿ ಬರುವ ಬಹುತೇಕ ಎಲ್ಲಾ ಪಾತ್ರಗಳೂ ಏನನ್ನೊ ಬಚ್ಚಿಟ್ಟುಕೊಂಡಿವೆ, ಅಲ್ಜೀರಿಯಾದ ಮೇಲೆ ನಡೆಸಿದ ವಸಾಹತುಶಾಹಿ ದಾಳಿ, 1961ರಲ್ಲಿ ಕೆಲವು ಅಲ್ಜೀರಿಯನ್ನರ ಮೇಲಿನ ಕಗ್ಗೊಲೆಗಳ ಫ್ರಾನ್ಸ್ ಬಚ್ಚಿಟ್ಟುಕೊಂಡಿರುವಂತಹ ಹತ್ತಾರು 'ಹಿಡೆನ್'ಗಳು ಇಲ್ಲಿವೆ. ಅಷ್ಟಕ್ಕೂ ಕತೆ ಸಾಗುವುದೂ ಕೂಡ 'ಹಿಡೆನ್' ಕ್ಯಾಮೆರಾದಲ್ಲೇ! ಇಂತಹ ಹತ್ತಾರು 'ಗುಪ್ತ ಕತೆಗಳ' ಹುದುಗಿಸಿಕೊಂಡಿರುವ ಈ ಕೆಚೆ ಸಿನಿಮಾವನ್ನು ಫ್ರಾನ್ಸ್‌ನ ಬೌದ್ಧಿಕ ವಲಯ ಬಹುವಾಗಿ ಮೆಚ್ಚಿಕೊಂಡಿತು; ಪ್ರತಿ ವರ್ಷವೂ ಫ್ರಾನ್ಸ್‌ನಲ್ಲಿ ನಡೆಯುವ ಜಗತ್ತಿನ ಪ್ರತಿಷ್ಠಿತ ಸಿನಿಮಾ ಫೆಸ್ಟಿವಲ್ ಆದ ಕೇನ್ಸ್ ಫೆಸ್ಟಿವಲ್ ಈ ಚಿತ್ರವ ನಿರ್ದೇಶಿಸಿದ ಮೈಖೇಲ್ ಹನೆಕೆಗೆ ಉತ್ತಮ ನಿರ್ದೇಶಕ ಪ್ರಶಸ್ತಿ ನೀಡಿ ಗೌರವಿಸಿತು. ಈ ಚಿತ್ರದ ತಿಳಿವು ಏಕಮುಖಿಯಲ್ಲ! ಬಹು ಅರ್ಥಗಳನ್ನು ಅಡಗಿಸಿಕೊಂಡಿರುವಂತಹದ್ದು. ಈ ಕಾಲದ ಜರೂರು, ಬಿಕ್ಕಟ್ಟುಗಳನ್ನು ಇದೇ ಕಾಲದ ಮಾಧ್ಯಮಗಳ ಅಣಕಿಸುತ್ತಾ ಹೇಳುವಂತಹದ್ದು! ಫ್ರಾನ್ಸ್‌ನಲ್ಲಿ ಯಾರೂ ತಮ್ಮ ದೇಶವನ್ನು ತಪ್ಪಾಗಿ ತೋರಿಸಲಾಗಿದೆ ಎಂದು ಗಲಾಟೆಯೆಬ್ಬಿಸಿ ಸಿನಿಮಾ ಮಂದಿರಗಳ ಧ್ವಂಸ ಮಾಡಲಿಲ್ಲ. ಈ ಕಾರಣದಿಂದಲೂ ಹನೆಕೆಯ ಕೆಚೆ ನಮಗಿಂದು ಮುಖ್ಯವಾಗುತ್ತದೆ.

**ಕನಕರಾಜ್ ಆರನಕಟ್ಟೆ**

ಚಿತ್ರದುರ್ಗ ಜಿಲ್ಲೆಯ ಆರನಕಟ್ಟೆಯ ಕನಕರಾಜ್ ಇಂಗ್ಲಿಷ್ ಸಾಹಿತ್ಯದ ಸ್ನಾತಕೋತ್ತರ ಪದವೀಧರ ಮತ್ತು ಕನ್ನಡದ ಪ್ರತಿಭಾವಂತ ಕಥೆಗಾರ, ಅನುವಾದಕ. 'ಅದಾದ ಮರುದಿನಕೆ', 'ಸಿಲೋನ್ ಸೈಕಲ್' ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಸೌದಿ ಅರೇಬಿಯಾದ ಪ್ರಿನ್ಸ್ ಸತ್ತಾಮ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರು.